**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ವಿರಾಜಪೇಟೆ</u>**

***<u>ಸಿ.ಸಿ. ಸಂಖ್ಯೆ : 947/2021</u>***

**ಪ್ರಾಸಾ : *2* ಸಿ ಸಬಾಸ್ಟಿನ್**

**<u>ದಿನಾಂಕ : *11-09-2023* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆ : *ಮಾನ್ಯ ಸ.ಸ.ಅ. ರವರಿಂದ.*</u>**

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಟಾರ್ಪಲ್, ಒಂದು ಹಗ್ಗ, ಎರಡು ಕತ್ತಿಗಳು, ಎರಡು ಚೂರಿ, ಒಂದು ಸಣ್ಣ ಚಾಕು, ಎರಡು ಚಾರ್ಜ್‌ಬಲ್ ಲೈಟ್, ಒಂದು ತೂಕದ ಯಂತ್ರ, ಎರಡು ಪ್ಲಾಸ್ಟಿಕ್ ಚೀಲ ಹಾಗೂ ಒಂದು ಮರದ ದಿಮ್ಮಿ ಗಳನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಪ್ಲಾಸ್ಟಿಕ್ ಟಾರ್ಪಲ್ ನ್ನು ಮು ಮಾ 1 ಎಂದು, ಹಗ್ಗವನ್ನು ಮು ಮಾ 2 ಎಂದು, ಎರಡು ಕತ್ತಿಗಳನ್ನು ಮು ಮಾ 3 ಹಾಗೂ 4 ಎಂದು, ಎರಡು ಚೂರಿಗಳನ್ನು ಮು ಮಾ 5 ಹಾಗೂ 6 ಎಂದು, ಒಂದು ಸಣ್ಣ ಚಾಕುವನ್ನು ಮು ಮಾ 7 ಎಂದು, ಎರಡು ಚಾರ್ಜಬಲ್ ಲೈಟ್ ಮು ಮಾ 8 ಹಾಗೂ 9 ಎಂದು, ತೂಕದ ಯಂತ್ರವನ್ನು ಮು ಮಾ 10 ಎಂದು, ಎರಡು ಪ್ಲಾಸ್ಟಿಕ್ ಚೀಲವನ್ನು ಮು ಮಾ 11 ಹಾಗೂ 12 ಎಂದು ಹಾಗೂ ಮರದ ದಿಮ್ಮಿಯನ್ನು ಮು ಮಾ 13 ಎಂದು ಗುರುತಿಸಲಾಯಿತು.

**<u>ಪಾಟಿ ಸವಾಲು : ಶ್ರೀ ಎ ಎಂ ಎಲ್ ಆರೋಪಿಗಳ ಪರ ವಕೀಲರಿಂದ</u>**

ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಆರೋಪಿಗಳು ನಮ್ಮ ಹಸುವನ್ನು ಎಳೆದುಕೊಂಡು ಅಥವಾ ಕರೆದುಕೊಂಡು ಹೋಗಿರುವುದಿಲ್ಲ ನಾವು ಖುದ್ದಾಗಿ ನೋಡಿರುವುದಿಲ್ಲ. ಮಹಜರನ್ನು ಬರೆಯುವಾಗ ಮು ಮಾ 1 ರಿಂದ 13 ನ್ನು ನಿಮ್ಮ ಸಮಕ್ಷಮ ಪೋಲಿಸರು ಪಡೆದುಕೊಂಡಿದ್ದಾರ ಎಂಬ ಪ್ರಶ್ನೆಗೆ ಸಾಕ್ಷಿಯು ಮಹಜರ ನಮ್ಮ ಮುಂದೆ ಬರೆದಿರುತ್ತಾರೆ, ಮು ಮಾಲುಗಳನ್ನು ಪೋಲಿಸರೇ ಮನೆಯ ಒಳಗಡೆ ಹೋಗಿ ತಂದಿರುತ್ತಾರೆ ಎಂದು ನುಡಿಯುತ್ತಾರೆ. 1 ನೇ ಆರೋಪಿಯ ಮನೆಯ ಒಳಗಿನಿಂದ ಪೋಲಿಸರು ಅವುಗಳನ್ನು ತಂದಿರುತ್ತಾರೆ. ನನಗೆ ದನದ ಮಾಂಸವನ್ನು ತಿನ್ನುವ ಅಭ್ಯಾಸವಿರುತ್ತದೆ. ನಾವು ನಮ್ಮ ಹಸುವನ್ನು ಬೇರೆ ಯಾರಿಗೋ ಮಾಂಸ ಮಾಡುವ ಉದ್ದೇಶದಿಂದ ಮಾರಿದ್ದು, ಅವುಗಳ ಕಳಬರಹ ಸಿಕ್ಕಾಗ ನಮಗೆ ತೊಂದರೆಯಾಗುತ್ತದೆ ಎನ್ನುವ ಕಾರಣಕ್ಕಾಗಿ ನಾವು ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗಳಿಗೂ, ಈ

ಪ್ರಕರಣಕ್ಕೂ ಹಾಗೂ ಮು ಮಾಲುಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿದೆ.

ಓ. ಹೇ. ಕೇ. ಸ. ಇದೆ.

ಸಹಿ/-

**(ಸಂತೋಷ ಕೊಠಾರಿ)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ವಿರಾಜಪೇಟೆ.